ಬರಲಿಲ್ಲ... ಹಿರಿಯರು ಹಬ್ಬ, ಹುಣ್ಣಿಮೆ... ಆಳು ಕಾಳು.. ಇಷ್ಟೇ ಬದುಕು.. ಇವರು... ನನ್ನ ರೂಪ ನೋಡಿ ಮರುಳಾಗಿ ನನ್ನ ಕೈ ಹಿಡಿದ ಇವರು... ನಾನು ಒಂದು ಸೂರಿನಡಿ ವಾಸಿಸುವ ಸದಸ್ಯರು ಅಷ್ಟೇ.

ಗಂಡ, ಹೆಂಡತಿ ಸಂಬಂಧ ಇಷ್ಟೆಯೇ?... ಮಕ್ಕಳಿಂದ ಅಪ್ಪ ಅಮ್ಮ ಎಂದು ಕರೆಸಿಕೊಳ್ಳುವುದು... ಬೇರೆ ಗಂಡ ಹೆಂಡಿರೆಲ್ಲಾ ಏನು ಮಾತಾಡುತ್ತಾರೆ... ಏನು ಮಾಡುತ್ತಾರೆ ಎಂದು ಎಷ್ಟೋ ದಿನ ತಲೆಕೆಡಿಸಿಕೊಂಡಿದ್ದೇನೆ.

ಮದುವೆಯಾದ ಹೊಸತರಲ್ಲಿ ಸಾಕಪ್ಪ.. ಇವರು ಕೊಂಚ ದೂರ ಎಲ್ಲಾದರು ಹೋಗಬಾರದೇ... ಎಂದು ಬೇಸರ ಮೂಡಿಸುವಷ್ಟು ಸಂಪರ್ಕ, ಎಲ್ಲಿ ಹೋಗಲಿ, ಬರಲಿ... ಹಗಲಾಗಲಿ.. ರಾತ್ರಿಯಾಗಲಿ... ಸದಾಶಿವನಿಗೆ ಅದೇ ಧ್ಯಾನ ಎನ್ನುವ ಹಾಗೆ ಸದಾ ನನ್ನ ಮೈಮೇಲೇ ಇವರ ಕೈಯಿ.. ಒಂದು ಮಾತಿಲ್ಲ, ಕಥೆಯಿಲ್ಲ... ಗಂಡು ಹೆಣ್ಣಿನ ಈ ಸಂಗ, ಸಂಬಂಧದ ಬಗ್ಗೆ ಜಿಗುಪ್ಸೆ ಹುಟ್ಟುವಷ್ಟು. ರಾಹುಲ್‌ನ ಬಸುರಿಯಾದ ಮೇಲೆ ಕೊಂಚ ರಿಲೀಫ್. ಮತ್ತೆ ರಾಧಿಕಾ... ಆಮೇಲೆ ನನ್ನ ಸೌಂದರ್ಯ ತಗ್ಗಿತೋ ಅಥವಾ ಅವರ ಬಯಕೆ ಹಿಡಿತಕ್ಕೆ ಸಿಕ್ಕಿತೋ ಅರಿಯೇ ನಾನು ತಡೆದುಕೊಳ್ಳುವಷ್ಟು ಸಂಗ, ಆದರೆ ಅಂಗ ಸಂಗ ಒಂದೇ ನಮ್ಮ ಸಂಬಂಧದ ಎಲ್ಲವೂ ಇನ್ನಾವ ಬೇರೆ ಮಾತುಕತೆಯೇ ಇಲ್ಲ...

ಅಬ್ಬಬ್ಬ ಅಂದರೆ ಐಶ್ವರ್ಯ ರೈ ಸುಂದರಿಯೇ, ದೀಪಿಕಾ ಪಡುಕೋಣೆ ಸುಂದರಿಯೇ ಎಂಬ ಚರ್ಚೆ ಕನ್ನಡ ಚಿತ್ರಕ್ಕೆ ಹೋಗೋಣವೇ ಅಥವಾ ಹಿಂದಿಯೇ? ಮಕ್ಕಳ ವಿಷಯವಾಗಿ ಅವರೇಕೆ... ನಾನೇ ತಲೆ ಕೆಡಿಸಿಕೊಳ್ಳ ಬೇಕಿರಲಿಲ್ಲ ಅಜ್ಜಿ, ಮುತ್ತಜ್ಜಿ ಎಂದು ಹಿರಿಯರ ಆರೈಕೆ.. ಶಾಲೆ, ಕಾಲೇಜು ಎಂದು ಭವಿಷ್ಯದ ಬಗ್ಗೆಯೂ ಯೋಚನೆಯಿಲ್ಲ.. ಊರಿನಲ್ಲಿರುವ ಅತ್ಯುತ್ತಮ ಶಾಲೆ ನಮ್ಮದೇ. ಇವರ ತಾತ ಶುರು ಮಾಡಿದ್ದು. ಕಾಲೇಜಿಗೆ ಬರುವ ಹೊತ್ತಿಗೆ ಇವರ ಅಪ್ಪ ಶುರು ಮಾಡಿದ್ದು ಇದೆ. ಬೇರೆ ಗಂಡ ಹೆಂಡತಿ ಏನು ಮಾತಾಡುತ್ತಾರೆ?..

ನಮ್ಮಪ್ಪ ಅಮ್ಮ ತುಂಬಾ ಮಾತಾಡುತ್ತಿರುತ್ತಿದ್ದರು. ಅಪ್ಪ ಅಮ್ಮನನ್ನು ಕೀಟಲೆ ಮಾಡುತ್ತಿದರು.. ಅಮ್ಮ ಹುಸಿ ಕೋಪ ತೋರುತ್ತಿದ್ದರು.. ಅಲ್ಲ ಹಾಗಲ್ಲ.. ಅಮ್ಮ ಅಂತಷ್ಟೇ ಅಲ್ಲ.. ಅಪ್ಪ ಎಲ್ಲರನ್ನೂ ಕೀಟಲೆ ಮಾಡುತ್ತಾರೆ. ಅವರ ಸ್ವಭಾವವೇ ಗಂಭೀರವಾಗಿ ಇರುವುದು ಇವರ ಸ್ವಭಾವ.

ನನ್ನ ರೂಪ ನೋಡಿ ಮರುಳಾಗಿ ಮದುವೆಯಾದವರು ಇವರು. ನನ್ನ ಎಷ್ಟು ಮರೆಸಬೇಕಿತ್ತು. ಬಾಯಿ ತುಂಬಾ ಹೊಗಳಬೇಕಿತ್ತು... ಆದರೆ ಚೆಂದಾಗಿ ಅಲಂಕಾರ ಮಾಡಿಕೊಂಡು, ಹೊಸ ಸೀರೆ ಉಟ್ಟು ಇವರ ಮೆಚ್ಚುಗೆಗೆ ಹಂಬಲಿಸಿ ಇವರ ಮುಂದೆ ಸುಳಿಯುತ್ತಿದೆ.

ಮೆಚ್ಚುಗೆಯ ಮಾತಿರಲಿ... ಆ ಅಲಂಕಾರ ಕೆಡಿಸುವವರೆಗೂ ಅವರಿಗೆ ಸಮಾಧಾನವಿಲ್ಲ...! ಎರಡನೇ ವರ್ಷದ ಗೌರೀ ಹಬ್ಬದ ದಿನ ಎಷ್ಟು ಅವಮಾನವಾಗಿತ್ತು. ಪೂಜೆಗೆ ಸಿದ್ಧಳಾಗಿ ಹೊಸ ಸೀರೆ ಉಟ್ಟು ಮುಖದ ಅಲಂಕಾರ ಮುಗಿಸಿಕೊಳ್ಳುವ ಹೊತ್ತಿಗೆ ಕೋಣೆಗೆ ಬಂದ ಇವರ ಹಿಡಿತದಲ್ಲಿ... ಇನ್ನೊಮ್ಮೆ ಸ್ನಾನ ಮಾಡಿ ಬೇರೆ ಸೀರೆ ಉಟ್ಟು ಬರುವುದರಲ್ಲಿ ಮಾವನವರಿಗೆ, ಅಜ್ಜಿಗೆ ಕೋಪ. ನನ್ನ ಮುಖ, ಮಗನ ವರ್ತನೆ ಅರ್ಥ ಮಾಡಿಕೊಳ್ಳುವ ಶಕ್ತಿ ಇದ್ದ ಅತ್ತೆ ಎರಡು ಮಾತಾಡಿರಲ್ಲಿಲ್ಲ. ಇನ್ನೂ ಅಜ್ಜಿಗೇ ಸುಮ್ಮನಾಗಲು ಹೇಳಿದ್ದರು.

ಗೌರಮ್ಮ ಇಷ್ಟೊತ್ತಿಗೇ ಪೂಜೆ ಮಾಡಿ ಅಂತ ಹೇಳಿದಾಳಾ? ಸುಮ್ಮನಿರಿ... ನಿಧಾನವಾಗಿ ಪೂಜೆ ಮಾಡಿದ್ರಾಯ್ತು...

ಅವಮಾನದಿಂದ ಪ್ರಾಣ ಹೋದಂತಾಗಿತ್ತು. ಆದರೆ... ಮೊದಲ ಬಾರಿ ಇವರೊಂದಿಗೆ ಜಗಳವಾಡಿದ್ದೆ.

'ನಿನ್ನ ರೂಪಕ್ಕೆ ನಾನು ಮೆಚ್ಚಿಗೆ ತೋರುವ ರೀತಿ ಅದು... ನೀನು ಚೆಂದವಾಗಿ ನನ್ನ ಮುಂದೆ ಓಡಾಡುತ್ತಿದ್ದರೆ... ನಂಗೆ ತಡ್ಕೊಳೋಕ್ಕೆ ಆಗಲ್ಲ... ನೀನು ಯಾಕೆ ಇಷ್ಟು ಸುಂದರವಾಗಿ ಇದ್ಯ?' ಎನ್ನುತ್ತಾ ನನ್ನ ಸೊಂಟ ಬಳಸಿ ತಮ್ಮ ಬಳಿ ಎಳೆದುಕೊಂಡರು ನನಗೆ ಮುಂದೆ ಮಾತಾಡಲು ಬಿಡಲಿಲ್ಲ..

ಸಂತೋಷ ಪಡಬೇಕೋ, ಬೇಸರ ಪಟ್ಟುಕೊಳ್ಳಬೇಕೋ.. ಅರಿಯದೆ ಅವರಿಗೆ ಶರಣಾದೆ. ಗಂಡ ಹೆಂಡತಿಯ ಸಂಬಂಧ ಅಂದರೆ ಇಷ್ಟೆಯೇ? ಇಪ್ಪತ್ತು ವರ್ಷಕ್ಕೆ ಮದುವೆಯಾಗಿ ಇಪ್ಪತ್ತೆಂಟಾಗುವ ಹೊತ್ತಿಗೆ ಎರಡು ಮಕ್ಕಳಾಗಿ ಈಗ ಮೂವತ್ನಾಲ್ಕಕ್ಕೆ ಬದುಕು ಸಾಕಾಗಿ.. ಇವರಿಂದ ಸುಮ್ಮನೆ ಇರೋದು ಕಲಿತುಕೋ ಎಂದು ಅನ್ನಿಸಿಕೊಳ್ಳುವ ಮಟ್ಟಿಗೆ ಜೀವನ ಹಳಸಿದೆ.

ಈಗ ತಾತ ಇಲ್ಲ. ಅಜ್ಜಿ ದೇವರ ಮನೆ ಬಿಟ್ಟು ಬರೊಲ್ಲ.. ಅತ್ತೆ ಮಾವ ಇಬ್ಬರಿಗೂ ಮಗ ಎಂದರೆ ಎಷ್ಟು ವ್ಯಾಮೋಹವೆಂದರೆ ಅವರು ಮಾಡಿದ್ದಕ್ಕೆ ಚಕಾರವೆತ್ತುವುದಿಲ್ಲ.. ಪ್ರಪಂಚದ ಅರಿವೇ ಇಲ್ಲದೆ ಮಕ್ಕಳು.. ಇವರಿಗೆ ಹೇಳುವವರು ಯಾರು?

## ನಿಷ್ಠುರಳಾದ ಅಮ್ಮ

ಈ ಮನೆ ಬಿಟ್ಟು ನಾನು ಎಲ್ಲೂ ಹೋಗಲಾರೆ ಎಂದು ಇವರಿಗೆ ಖಚಿತ. ಐದು ವರ್ಷದ ಹಿಂದೆ ಏಳು ವರ್ಷದ ರಾಹುಲ್, ಆರು ವರ್ಷದ ರಾಧಿಕಾಳನ್ನು ಕರೆದುಕೊಂಡು ಅಮ್ಮನ ಮನೆಗೆ ಹೋಗಿ ಒಂದು ವಾರಕ್ಕೆ ಅಲ್ಲಿ ನಾನು ಪರಕೀಯಳು.. ವಿಕ್ರಮನ ಮಡದಿಯಾಗಿ ಹೋದರೆ ಮಾತ್ರ ನನಗೆ ಅಲ್ಲಿ ಸ್ವಾಗತ, ಮರ್ಯಾದೆ.. ಆ ಮನೆ ಮಗಳು ಎಂದು ಹೋದರೆ... ಇಲ್ಲ.. ನೀನು ಹಳ್ಳಿಮನೆ ಸೊಸೆ, ವಿಕ್ರಮನ ಮಡದಿ, ಅವನ ಮಕ್ಕಳ ತಾಯಿ. ಆ ಮನೆ ಬಿಟ್ಟು ಬಂದರೆ ಈ ಮನೆಯಲ್ಲಿ ಸ್ಥಾನವಿಲ್ಲ ಎಂದು ನಿಷ್ಠುರವಾಗಿ ಹೇಳಿದ್ದಳಲ್ಲ ಅಮ್ಮ...

ನನ್ನನ್ನು, ನನ್ನ ಮಕ್ಕಳನ್ನು ಕರೆದುಕೊಂಡು ಬಂದು ಬಿಟ್ಟು, ಮಗಳು ದುಡುಕಿದಳು ಎಂದು ಇವರ, ಅತ್ತೆ ಮಾವನ ಕ್ಷಮಾಪಣೆ ಕೇಳಿ ಹೋಗಿದ್ದರು. ಅತ್ತೆ ಮನೆಯಲ್ಲಿ ಗಂಡನ ಸಂಗದಲ್ಲಿ ಕಷ್ಟವಿದ್ದಾಗ ತಾನೇ ತೌರು ಬೇಕು ಹೆಣ್ಣಿಗೆ.. ಅತ್ತೆ ಮನೆಯಲ್ಲಿ, ಗಂಡನ ಸಹವಾಸದಲ್ಲಿ ಸುಖವಿದ್ದರೆ.. ತೌರಿನ ಹಂಬಲವೆಲ್ಲಿ ಇರುತ್ತದೆ? ಆದರೆ ವಿಪರ್ಯಾಸವೆಂದರೆ ಅತ್ತೆ ಮನೆಯಲ್ಲಿ ಸುಖವಿದ್ದಾಗ ತೌರಿನವರು ಕರೆಯುತ್ತಾರೆ.. ಉಡಿ ತುಂಬುತ್ತಾರೆ.. ಮನೆ ಮಗಳು ಎಂದು ಸಡಗರ. ಅತ್ತೆ ಮನೆ ಕಷ್ಟ, ಗಂಡ ಕಿರುಕುಳ ಕೊಡುತ್ತಾನೆ. ಅಥವಾ ನನ್ನ ವಿಷಯದಲ್ಲಿ ಆದ ಹಾಗೆ ಗಂಡ ಲಂಪಟ ಎಂದು ತೌರಿಗೆ ಹೋದರೆ ಹೊಂದಿಕೊಂಡು ಬಾಳು, ತೌರು ಮನೆಯಲ್ಲಿ ಆಶ್ರಯವಿಲ್ಲ ಎಂದು ಕದ ಮುಚ್ಚುತ್ತಾರೆ.

ನಿನ್ನ ರೂಪ ಕಂಡು ಹಿಂದೆ ಬಿದ್ದು ನಿನ್ನ ಮದುವೆಯಾದವರು ಅಳಿಯಂದಿರು. ಆ ರೂಪ ಉಳಿಸಿಕೊಳ್ಳಬೇಕಲ್ಲವೇ? ದಪ್ಪ ಆಗಿಬಿಟ್ಟಿದ್ಯ.. ಅಲಂಕಾರ ಕೂಡ ಚೆಂದಾಗಿ ಮಾಡಿಕೊಳ್ಳಲ್ಲ... ಅವರ ಕಣ್ಣು ಅತ್ತಿತ್ತ ಹೋಗುವುದು ಸಹಜ... ನೀನು ಮೊದಲು ಸಣ್ಣಗಾಗು...

ನನಗೆ ಅತ್ತೆಯ ಮುಂದೆ ಅಮ್ಮನ ಸೂಚನೆ, ಉಪದೇಶ!

'ಹೇಳಿ.. ನೀವೇ ಹೇಳಿ, ನಾನು ಹೇಳಿದರೆ ಕೋಪಿಸಿಕೊಳ್ತಾಳೆ.. ಗಂಡಸರನ್ನು ಕಟ್ಟಿ ಹಾಕಿಕೊಳ್ಳಬೇಕು.. ಆ ಯೋಗ್ಯತೆ ಇಲ್ಲದಿದ್ದರೆ ಸಹಿಸಿಕೊಳ್ಳಬೇಕು. ಗಂಡಸು ಅವ್ನು! ವಯಸ್ಸಿದೆ. ಕೈಯಲ್ಲಿ ಕಾಸಿದೆ. ನೂರೆಂಟು ಕಡೆ ಹೋಗ್ತಾನೆ ಬರ್ತಾನೆ... ಹೆಂಗಸರು ಮೈ ಮೇಲೆ ಬೀಳ್ತಾರೆ. ನನ್ನ ಮಗ ತಾನೇ ಏನು ಮಾಡ್ತಾನೆ...?' ಅತ್ತೆಯಿಂದ ಅಮ್ಮನ ಮುಂದೆ ಇಷ್ಟುದ್ದ ಮಗನ ಅವಗುಣಗಳ ಗುಣಗಾನ.

ಎಷ್ಟು ವರ್ಷ ಹೀಗೆ? ಮದುವೆಯಾಗಿ ಒಂಬತ್ತು ವರ್ಷವಾಯಿತು. ಎರಡು ಮಕ್ಕಳಾದವು. ಇನ್ನೂ ರೂಪ, ವೈಯಾರ ಅಂತಲೇ ಇದ್ರೆ ಹೇಗೆ?.. ಅದಕ್ಕೆ ಮೀರಿ ಸಂಬಂಧ ಇರಬೇಕಲ್ಲವೇ?..

ನನ್ನ ಪ್ರಶ್ನೆಗೆ ಉತ್ತರವಿರಲಿಲ್ಲ. ಅತ್ತೆ ಅಮ್ಮ ಇವರಿಬ್ಬರಲ್ಲೂ ಉತ್ತರವಿರಲಿಲ್ಲ. ಅಮ್ಮ ಇನ್ನೂ ರೂಪದಿಂದಲೇ ಅಪ್ಪನನ್ನು ಹಿಡಿದಿಟ್ಟು ಕೊಂಡಿದ್ದಾಳೆಯೇ? ಮಗಳಾಗಿ ನಾನು ಕೇಳುವ ಪ್ರಶ್ನೆಯೇ ಅದು?... ಅಥವಾ ಅಪ್ಪನ ಬಳಿ ಇವರ ಬಳಿ ಇರುವ ಹಾಗೆ ದುಡ್ಡು, ಸ್ಥಾನ ಇಲ್ಲದಿರುವುದರಿಂದ ಯಾರೂ ಅವರ ಹಿಂದೆ ಬರುವುದಿಲ್ಲವೇ?

'ಹಳ್ಳಿ ಮನೆಯಂಥ ದೊಡ್ಡ ಸಂಬಂಧ ಸಿಗುವುದು ಸುಲಭವಲ್ಲ. ನಿಂಗೆ ಸಿಕ್ಕಿದೆ

---

### ವ್ಯತ್ಯಾಸ

ಎದಿಗೊದ್ದಂಗ್ ಬಾಳ್ಬೇಕು  
ಅಂತಿದ್ರು ಹಿರೀರು  
ಎದ್ದಾಗ್ಲಿಂದ ಯಾಮಾರ್ಸೇ  
ಬದ್ಕನ ಅಂತಿವೆ ಕಿರೀರು!

★ ಸಂತೆಬೆನ್ನೂರು ಫೈಜ್ನಾಟ್ರಾಜ್




---